ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 06–10–2020

## ಮಾಧ್ಯಮ ಆಮಂತ್ರಣ

**ಕೋವಿಡ್19ರ ಸೋಂಕು ನಿಯಂತ್ರಣ ಮತ್ತು ಸೋಂಕಿತರ ಚಿಕಿತ್ಸೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಕುರಿತಂತೆ ಪರಿಶೀಲನಾ ಸಭೆ :**

ಅಧ್ಯಕ್ಷತೆ : ವಿ. ಸೋಮಣ್ಣ, ವಸತಿ ಸಚಿವರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯದ ಕೋವಿಡ್–19 ಉಸ್ತುವಾರಿ ಸಚಿವರು.

ದಿನಾಂಕ : 07–10–2020, ಬುಧವಾರ, ಸಮಯ : ಬೆಳಗ್ಗೆ : 11.00 ಗಂಟೆಗೆ
ಸ್ಥಳ : ಹೋಟೆಲ್ ಕೆನೋಪಿ, 2ನೇ ಮಹಡಿ, ಯುಟಿಲಿಟಿ ಬಿಲ್ಡಿಂಗ್, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 06 (ಕರ್ನಾಟಕ ವಾರ್ತೆ) : ಕರ್ನಾಟಕ ಸಾಹಿತ್ಯ ಅಕಾಡೆಮಿಯು ರಾಜ್ಯಮಟ್ಟದ ಮೂರು ದಿನಗಳ ಕಥಾ ಕಮ್ಮಟ, ಲಲಿತ ಪ್ರಬಂಧ ಕಮ್ಮಟ, ವಿಜ್ಞಾನ ಸಾಹಿತ್ಯ ಕಮ್ಮಟ ಹಾಗೂ ಸಾಹಿತ್ಯ ಮತ್ತು ಸಾಮಾಜಿಕ ಜಾಲತಾಣ ಕಮ್ಮಟಗಳನ್ನು ಏರ್ಪಡಿಸಿದ್ದು, ಈ ಕಮ್ಮಟಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವರರ ವಯೋಮಿತಿ 20 ರಿಂ 45 ವರ್ಷದೊಳಗಿರಬೇಕು. ಪ್ರತಿ ಕಮ್ಮಟಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಅಕ್ಟೋಬರ್ 20 ಕಡೆಯ ದಿನಾವಾಗಿದ್ದು, ಅರ್ಜಿ ಹಾಗೂ ಹೆಚ್ಚಿನ ವಿವರಗಳಿಗೆ http://karnatakasahithyaacademy.org ನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

# ಸಂಪನ್ಮೂಲ ವ್ಯಕ್ತಿಗಳಿಂದ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 6 (ಕರ್ನಾಟಕ ವಾರ್ತೆ) :

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ರಾಜ್ಯ/ಜಿಲ್ಲೆ/ತಾಲ್ಲೂಕು ಗ್ಯಾಸೆಟಿಯರ್ ಸಂಪುಟಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ರಚಿಸಿ ಪ್ರಕಟಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಹಾಗೂ ತಾಲ್ಲೂಕು ಗ್ಯಾಸೆಟಿಯರ್ ಸಂಪುಟಗಳಲ್ಲಿ ಪ್ರಮುಖವಾಗಿ ಇತಿಹಾಸ, ಅರ್ಥಶಾಸ್ತ್ರ, ಕನ್ನಡ, ವಾಣಿಜ್ಯ ಶಾಸ್ತ್ರ ಹಾಗೂ ರಾಜ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಾಯಗಳಿದ್ದು ಲೇಖಕರು ಅಧ್ಯಾಯಗಳ ರಚನಾಕಾರ್ಯ ನಿರ್ವಹಿಸಬೇಕಿರುತ್ತದೆ.

ಇಲಾಖೆಯು 2020-21 ನೇ ಸಾಲಿನಲ್ಲಿ 1) ಬೆಂಗಳೂರು ಗ್ರಾಮಾಂತರ, 2) ರಾಮನಗರ, 3)ಚಿಕ್ಕಬಳ್ಳಾಪುರ ಜಿಲ್ಲಾಗ್ಯಾಸೆಟಿಯರ್ ಗಳ ರಚನಾ ಕಾರ್ಯವನ್ನು ಹಮ್ಮಿಕೊಂಡಿದ್ದು, ಈ ಜಿಲ್ಲಾ ಗ್ಯಾಸೆಟಿಯರ್‌ಗಳ ಅಧ್ಯಾಯಗಳನ್ನು ಸಂಶೋಧನಾ ಕಾರ್ಯದಲ್ಲಿ ಆಸಕ್ತಿಯುಳ್ಳ ಸ್ನಾತಕೋತ್ತರ ಪದವಿಧರರು(ಪಿ.ಹೆಚ್‌ಡಿ) ಜೊತೆಗೆ ರಚನಾಕಾರ್ಯದಲ್ಲಿ 5 ರಿಂದ 10 ವರ್ಷಗಳ ನಿರಂತರ ಅನುಭವ ಉಳ್ಳ ಹಾಗೂ ಸ್ಥಳೀಯ ಹಿನ್ನಲೆಯುಳ್ಳ ಸಂಪನ್ಮೂಲ ವ್ಯಕ್ತಿಗಳಿಂದ ರಚಿಸಲು ಉದ್ದೇಶಿಸಿದೆ.

ಆಸಕ್ತಿಯುಳ್ಳ ಸ್ನಾತಕೋತ್ತರ ಪದವಿಧರರು(ಪಿ.ಹೆಚ್‌ಡಿ) ತಾವು ರಚಿಸಿರುವ ಪುಸ್ತಕಗಳ/ ಲೇಖನಗಳೊಂದಿಗೆ ಸ್ವವಿವರವನ್ನು ಈ ಕಚೇರಿಯ ಇ-ಮೇಲ್ ವಿಳಾಸ karnatakagazetteer@gmail.comಕ್ಕೆ 15 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಸಂಪನ್ಮೂಲ ವ್ಯಕ್ತಿಗಳು ರಚಿಸಿರುವ/ಬರೆದಿರುವ ಲೇಖನಗಳು/ಪುಸ್ತಕಗಳು, ವಿಶ್ವವಿದ್ಯಾಲಯಗಳು ಪ್ರಕಟಿಸುವ ಜರ್ನಲ್ಸ್/ಪ್ರಸಾರಂಗಗಳಲ್ಲಿ ಪ್ರಕಟಿತಗೊಂಡಿರುವವರಿಗೆ ಆದ್ಯತೆ ನೀಡಲಾಗುವುದು. ಆಯ್ಕೆಯಾದ ಲೇಖಕರಿಗೆ ಅಧ್ಯಾಯ ರಚನಾ ಕಾರ್ಯದಲ್ಲಿ ಸುಮಾರು 350 ರಿಂದ 400 ಪದಗಳ ಮಿತಿಗೊಳಪಟ್ಟು, ಪುಟ ಒಂದಕ್ಕೆರೂ 750/- ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಇವರ ಕಚೇರಿಯ ದೂರವಾಣಿ ಸಂಖ್ಯೆ: 080-22213474 ಮೊ: 9980853108 ಸಂಪರ್ಕಿಸಬಹುದು ಎಂದು ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಪ್ರಕಟಣೆ ತಿಳಿಸಿದೆ.